volume-9 issue-213 rni/karkan/71496 prise 1rs paje 2 22-10-25 wednesdaychamarajanagar
nimcenturybird@gmail.com

ಸುದ್ದಿ ಹಾಗೂ ಜಾಹಿರಾತಿಗೆ ಸಂಪರ್ಕಿಸಿ 7553233037

# ನಿಂಪು ವಾರ್ತೆ

ಸಂಪಾದಕ ಎನ್.ರಾಜೇಶ್ ಕನ್ನಡ ದಿನ ಪತ್ರಿಕೆ ಚಾಮರಾಜನಗರ ಜಿಲ್ಲೆ mob: 7353233047

ಗುಂಡ್ಲುಪೇಟೆ ಯಳಂದೂರು ತಾಲೂಕುಗಳಲ್ಲಿ ವರದಿಗಾರರು ಬೇಕಾಗಿದ್ದಾರೆ

ಸಂಪುಟ–9 ಸಂಚಿಕೆ – 213 ದಿನಾಂಕ 22-10-25 ಬುಧವಾರ ಚಾಮರಾಜನಗರ ಪುಟ 2 ಬೆಲೆ 1 ರೂ

## ಅ. 23ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

ಚಾಮರಾಜನಗರ, ಅಕ್ಟೋಬರ್ 21 (ನಿಂಪುವಾರ್ತೆ):– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಅಕ್ಟೋಬರ್ 23 ರಂದು ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್ಕುಮಾರ್ ಜಿಲ್ಲಾ ರಂಗಮಂದಿರದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೇವಾಲಯಗಳಲ್ಲಿ ಗೋಪೂಜೆ

ಬಲಿಪಾಡ್ಯಮಿಯ ದಿನವಾದ ಅಕ್ಟೋಬರ್ 22ರಂದು (ಬುಧವಾರ) ಧಾರ್ಮಿಕ ದತ್ತಿ ಇಲಾಖೆಯ ಅಧೀನದ ಎಲ್ಲ ದೇವಸ್ಥಾನಗಳು ಮತ್ತು ಸಂಸ್ಥೆಗಳಲ್ಲಿ ಸನಾತನ ಹಿಂದೂ ಧರ್ಮದ ವಿಧಿ ವಿಧಾನಗಳ ಪ್ರಕಾರ ಗೋಪೂಜೆ ನೆರವೇರಿಸಬೇಕು' ಎಂದು ಸೂಚಿಸಲಾಗಿದೆ.

ಪ್ರತಿ ದೇವಾಲಯದಲ್ಲಿ ಒಂದೊಂದು ಗೋಮಾತೆಯನ್ನು ಪೂಜಿಸಬೇಕು. ಗೋವುಗಳಿಗೆ ಸ್ನಾನ ಮಾಡಿಸಿ, ದೇವಾಲಯಕ್ಕೆ ಕರೆತಂದು ಅರಿಶಿನ, ಕುಂಕುಮ, ಹೂವುಗಳಿಂದ ಅಲಂಕರಿಸಿ, ಅಕ್ಕಿ, ಬೆಲ್ಲ, ಬಾಳೆಹಣ್ಣು, ಸಿಹಿ ತಿನಿಸು ಮುಂತಾದ ಗೋಗ್ರಾಸವನ್ನು ಹಸುವಿಗೆ ನೀಡಬೇಕು. ಗೋವುಗಳನ್ನು ಧೂಪ, ದೀಪಗಳಿಂದ ಪೂಜಿಸಿ, ನಮಸ್ಕರಿಸುವ ವ್ಯವಸ್ಥೆ ಮಾಡಬೇಕು. ಬುಧವಾರ ಸಂಜೆ ಗೋಧೂಳಿ ಲಗ್ನದಲ್ಲಿ ದೇವಸ್ಥಾನಗಳಲ್ಲಿ ಗೋಪೂಜೆ ನಡೆಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನಿಂಪು ವಾರ್ತೆ

## ನಗರದಲ್ಲಿ ಹುತಾತ್ಮರ ದಿನದ ಅರ್ಥಪೂರ್ಣ ಆಚರಣೆ

## ಜಿಲ್ಲಾ ನ್ಯಾಯಾಧೀಶರಿಂದ ಗೌರವ ಸಮರ್ಪಣೆ

ಚಾಮರಾಜನಗರ, ಅಕ್ಟೋಬರ್ 21 (ನಿಂಪುವಾರ್ತೆ):– ಸಾರ್ವಜನಕ ಆಸ್ತಿ–ಪಾಸ್ತಿ ಸಂರಕ್ಷಣೆಯ ಕರ್ತವ್ಯದ ಸಂದರ್ಭದಲ್ಲಿ ಹುತಾತ್ಮರಾದ ಪೊಲೀಸರ ಸ್ಮಾರಕಕ್ಕೆ ಪುಷ್ಪಗುಚ್ಛ ಸಮರ್ಪಣೆ ಮೂಲಕ ನಗರದಲ್ಲಿಂದು ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಚಾಮರಾಜನಗರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ರಾಜ್ಯದಲ್ಲಿಯೇ ಅತೀ ಎತ್ತರದ (27 ಅಡಿ) ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಜಿಲ್ಲಾ ಪ್ರಧಾನ ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಪ್ರಧಾನ ಸೆಷೆನ್ಸ್ ನ್ಯಾಯಾಧೀಶರಾದ ಜಿ. ಪ್ರಭಾವತಿ ಅವರು ಇದೊಂದು ಮಹತ್ವದ ದಿನವಾಗಿದೆ. ಕರ್ತವ್ಯದ ಸಂದರ್ಭದಲ್ಲಿ ಹುತಾತ್ಮರಾಗಿ, ಕುಟುಂಬದಿಂದ ದೂರವಾದ ಸ್ಮರಣೀಯ ದಿನವೂ ಆಗಿದೆ. ಕಾಡಿನ ರಕ್ಷಣೆ ಅರಣ್ಯ ಪಾಲಕರ ಕರ್ತವ್ಯವಾದರೆ, ನಾಡಿನ ಜನರ ರಕ್ಷಣೆಗೆ ಟೊಂಕಕಟ್ಟಿ ನಿಲ್ಲುವ ಪೊಲೀಸರ ಸೇವಾ ಕಾರ್ಯ ಅವಿಸ್ಮರಣೀಯ ಹಾಗೂ ಶ್ಲಾಘನೀಯವಾದದ್ದು. ಸಮಾಜದಲ್ಲಿ ಜನರು ಶಾಂತಿ, ಸಾಮರಸ್ಯ ಹಾಗೂ ಸಹಬಾಳ್ವೆ ನಡೆಸುವಲ್ಲಿ ಪೊಲೀಸರ ಪಾತ್ರ ಪ್ರಮುಖವಾಗಿದೆ ಎಂದರು.

ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿ ಜನತೆ ಶಾಂತಿ, ನೆಮ್ಮದಿಯಿಂದ ಜೀವನ ನಡೆಸಲು ಪೊಲೀಸರ ದಕ್ಷತೆ ಹಾಗೂ ಪ್ರಾಮಾಣಿಕತೆಯೇ ಕಾರಣವಾಗಿದೆ. ಕರ್ತವ್ಯದ ಸಮಯದಲ್ಲಿ ಸಾಕಳ್ಟು ಮಂದಿ ಪೊಲೀಸರು ಹುತಾತ್ಮರಾಗಿದ್ದಾರೆ, ಅವರಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಕಾನೂನು ಪಾಲನೆ ಹಾಗೂ ಪೊಲೀಸರ ಕರ್ತವ್ಯಗಳ ಬಗ್ಗೆ ಶಿಕ್ಷಕರು ತಿಳಿಹೇಳಬೇಕು. ಆಗಮಾತ್ರ ದೇಶಕ್ಕೆ ಉತ್ತಮ ನಾಯಕನನ್ನು ಸೃಷ್ಠಿಸಲು ಸಾಧ್ಯವಾಗಲಿದೆ ಎಂದು ಜಿಲ್ಲಾ ನ್ಯಾಯಾಧೀಶರಾದ ಪ್ರಭಾವತಿ ಅವರು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿ, ಹುತಾತ್ಮ ಪೊಲೀಸರ ನಾಮವಾಚನ ಮಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಅವರು 1959ರ ಇದೇ ದಿನದಂದು ಲಡಾಕ್ನ ಅಕ್ಸಾಯ್ ಪ್ರದೇಶದಲ್ಲಿ ಗಡಿಪಹರೆಯಲ್ಲಿದ್ದ ನಮ್ಮ ಸೈನಿಕರ ಮೇಲೆ ಚೀನಾ ಸೈನಿಕರು ಏಕಾಏಕಿ ದಾಳಿ ನಡೆಸಿದರು. ನಿಶಸ್ತ್ರರಾಗಿದ್ದ ನಮ್ಮ ಸೈನಕರು ಎದೆಗುಂದದೇ ಹೋರಾಡಿದರು. ಹೋರಾಟದಲ್ಲಿ ನಮ್ಮ 10 ಮಂದಿ ಸೈನಕರು ವೀರಮರಣ ಹೊಂದಿದ ಸ್ಮರಾಣಾರ್ಥ ಭಾರತ ಸರ್ಕಾರವು 16 ಸಾವಿರ ಅಡಿ ಎತ್ತರದ ಲಡಾಕ್ನ ಅಕ್ಸಾಯ್ ಸ್ಥಳದಲ್ಲಿ ಸ್ಮಾರಕ ನಿರ್ಮಿಸಿದೆ. ಅಂದಿನಂದ ಪ್ರತಿವರ್ಷ ಅಕ್ಟೋಬರ್ 21ರಂದು ಹುತಾತ್ಮರ ದಿನವನ್ನು ದೇಶಾದ್ಯಂತ ಆಚರಿಸಲಾಗುತ್ತಿದೆ ಎಂದರು.



ಈ ಬಾರಿ ಕರ್ತವ್ಯದ ಸಂದರ್ಭದಲ್ಲಿ ಕರ್ನಾಟಕದ 8 ಮಂದಿ ಪೊಲೀಸರು ಸೇರಿದಂತೆ ದೇಶದಲ್ಲಿ 191 ಮಂದಿ ಪೊಲೀಸರು ಹುತಾತ್ಮರಾಗಿದ್ದಾರೆ. ಅವರೆಲ್ಲರಿಗೂ ಗೌರವ ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಬಾರಿ ಜಿಲ್ಲೆಯಲ್ಲಿ ಹುತಾತ್ಮರ ದಿನವನ್ನು ವಿಶೇಷವಾಗಿ ಆಚರಿಸುವ ಸಲುವಾಗಿ ರಾಜ್ಯದಲ್ಲಿಯೇ ಅತಿ ಎತ್ತರದ (ದೇಶದಲ್ಲಿ 2ನೇಯದು) ಪೊಲೀಸ್ ಸ್ಮಾರಕವನ್ನು ಚಾಮರಾಜನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ಖ್ಯಾತ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ ಒಡೆತನದ ಕ್ಯಾಂಪಾ ಕೋಲಾ ಬೇವರೇಜ್ ಕಂಪನಿ ನೆರವಿನೊಂದಿಗೆ ನೂತನವಾಗಿ ನಿರ್ಮಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಅವರು ಹೇಳಿದರು.

ಆರಂಭದಲ್ಲಿ ಪೊಲೀಸ್ ತುಕಡಿಗಳಿಂದ ಜಿಲ್ಲಾ ಪ್ರಧಾನ ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಗೌರವ ವಂದನೆ ಸ್ವೀಕರಿಸಿದರು.

ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರಾದ ಬಿ. ಭಾಸ್ಕರ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಪೊಲೀಸ್ ಅಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹುತಾತ್ಮರ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸಲಾಯಿತು. 2 ನಿಮಿಳಗಳ ಕಾಲ ಮೌನ ಆಚರಿಸಲಾಯಿತು. ಬಳಿಕ ಪೊಲೀಸ್ ಬ್ಯಾಂಡ್ನಿಂದ ಶತಶತಮಾನಗಳ ಚಿರನೂತನ 'ಅಬಾಯ್ಡ್ ವಿತ್ ಮಿ' ಗೀತೆ ನುಡಿಸಲಾಯಿತು

## ಮಹದೇಶ್ವರಬೆಟ್ಟದಲ್ಲಿ ಹಾಲರವಿ ಉತ್ಸವ



ಹನೂರು : ಹನೂರು ತಾಲೂಕಿನ ಮಲೆ ಮಹದೇಶ್ವರಬೆಟ್ಟದಲ್ಲಿ ದೀಪಾವಳಿ ಜಾತ್ರೆಯ ಅಂಗವಾಗಿ ಮಂಗಳವಾರ ಹಾಲರವಿ ಉತ್ಸವ, ಕತ್ತಿ ಪವಾಡ ಮತ್ತು ಮಜ್ಜನಸೇವೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಹಸಿರು ಸೀರೆ ಉಟ್ಟಿದ್ದ ಬೇಡಗಂಪಣ ಸಮುದಾಯದ 101 ಬಾಲಕಿಯರು ಕಳಶದಲ್ಲಿ ಹೊತ್ತು ತಂದ ಜಲಕ್ಕೆ ವಿಶೇಷ ಪೂಜೆ ಸಲ್ಲಿಸಿ, ಮಹದೇಶ್ವರ ಸ್ವಾಮಿಗೆ ಅಭಿಳಷೇಕ ಮಾಡಲಾಯಿತು.

ಅರಣ್ಯಪ್ರದೇಶದಲ್ಲಿನ ಹಾಲರವಿ ಹಳ್ಳದಲ್ಲಿ 101 ಹೆಣ್ಣುಮಕ್ಕಳು ಸೂರ್ಯೋದಕ್ಕೂ ಮುನ್ನ ಮಂಜು ಮುಸುಕಿನ ಚಳಿಯನ್ನುಲೆಕ್ಕಿಸದೆ ತೆರಳಿ ಹಾಲಹಳ್ಳದಜಲವನ್ನು ಬಿಂದಿಗೆಗೆ ತುಂಬಿಕೊಂಡು 10 ಕಿ.ಮೀ ಕಾಲ್ನಡಿಗೆಯಲ್ಲೇ ಸಾಗಿದ ಬೆಟ್ಟದ ಕತ್ತಿ ಪವಾಡ ಕೊಳಕ್ಕೆತಲುಪಿದರು.

ಈ ವೇಳೆ ಸಾಲೂರು ಮಠದ ಪೀಠಾಧಿಪತಿ ಶಾಂತಮಲ್ಲಿಕಾಜುನಸ್ವಾಮಿಸಾನ್ನಿಧ್ಯದಲ್ಲಿ ಬೇಡಗಂಪಣ ಸಮುದಾಯದವರು ಹುಗ್ಗಿ ಬಸವಪೂಜೆ ಸಲ್ಲಿಸಿದ ನಂತರ ತಮ್ಮಡಿಗಳಿಂದ ಕತ್ತಿಪವಾಡಸೇವೆ ನೆರವೇರಿತು.

ಬಳಿಕ ಹಾಲರವಿಉತ್ಸವ ನಡೆಯಿತು.

ಭಕ್ತರಸಮ್ಮುಖದಲ್ಲಿ ಛತ್ರಿ, ಚಾಮರಹಾಗೂದೀವಟಿಗೆಸೇವೆಯೊಂದಿಗೆ ಮಂಗಳವಾದ್ಯ ಸಮೇತ ಮೆರವಣಿಗೆ



ಹೊರಟ ಹಾಲರವಿಉತ್ಸವವು ತಮ್ಮಡಿಗೇರಿ, ರಸ್ತೆ ಸೇರಿದಂತೆ ಅನೇಕ ರಸ್ತೆಗಳ ಮೂಲಕ ದೇವಾಲದತ್ತ ಮೆರವಣಿಗೆ ಸಾಗಿತು. ಈ ವೇಳೆ ನೆರೆದಿದ್ದಭಕ್ತರು 'ಉಘೇಮಾದಪ್ಪ', 'ಉಘೇಮಾಯ್ಕಾರ' ಎಂದು ಹರ್ಷೋದ್ಗಾರ ಮಾಡಿದರು. ದೇವಾಲಯ ತಲುಪಿದ ಹೆಣ್ಣುಮಕ್ಕಳು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದರು. ಅವರು ತಂದ ಜಲದಿಂದ ಮಹದೇಶ್ವರರಿಗೆ ಅಭಿಳೇಕ ನೆರವೇರಿಸಲಾಯಿತು.

ನೆರೆದಿದ್ದ ಭಕ್ತರಿಗೆ ಹಾಗೂ ಸ್ಥಳೀಯರಿಗೆ ಹಾಲರವಿ ಹೊತ್ತಿದ್ದಬಾಲಕಿಯರು ತೀರ್ಥವಿತರಣೆಮಾಡಿದರು.

ಮಲೆಮಹದೇಶ್ವರಸ್ವಾಮಿಕ್ಷೇತ್ರಅಭಿವೃದ್ಧಿಪ್ರಾಧಿಕಾರದ ಕಾರ್ಯದರ್ಶಿ ಎಇ ರಘು ಪಾರುಪತ್ತೆದಾರರಾದ ಮಹದೇವಸ್ವಾಮಿ ಸ್ಥಳೀಯ ಮುಖಂಡರು, ಬೇಡಗಂಪಣ ಸಮುದಾಯದವರು ಇತರರು ಇದ್ದರು.

## ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ



ಕೊಳ್ಳೇಗಾಲ. ನಗರಸಭೆ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ಶಾಸಕರ ಅನುದಾನ 36 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು.

ನಗರದ ಲಿಂಗಣಾಪುರ ಬಡಾವಣೆಯಲ್ಲಿ 10 ಲಕ್ಷ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿ, ಬಾಪುನಗರ ಸರ್ಕಾರಿ ಶಾಲೆಯಲ್ಲಿ 16.20 ಲಕ್ಷ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಾಣ ಹಾಗೂ ಮುಡಿಗುಂಡ ಆದರ್ಶ ಶಾಲೆಯಲ್ಲಿ 10 ಲಕ್ಷ ವೆಚ್ಚದ ರಂಗಮಮದಿರ ನಿರ್ಮಾಣಕ್ಕೆ ಶಾಸಕರು ಗುದ್ದಲಿ ಪೂಜೆ ನಡೆಸಿ ಮಾತನಾಡಿ, ಇಂದು ಶಾಸಕರ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನಡೆಸಲಾಗಿದೆ. ಈ ಎಲ್ಲಾ ಕಾಮಗಾರಿಗಳನ್ನು ಸಂಬಂಧಪಟ್ಟವರು ಗುಣಮಟ್ಟದಲ್ಲಿ ಮಾಡುವಂತೆ ತಿಳಿಸಿದರು.

ಈ ಸಂಧರ್ಭದಲ್ಲಿ ನಗರಸಭೆ ಅಧ್ಯಕ್ಷರು ರೇಖಾರಮೇಶ್, ಉಪಾಧ್ಯಕ್ಷರು ಎ.ಪಿ.ಶಂಕರ್, ಸ್ಥಾಯಿ ಸಮಿತಿ ಅಧ್ಯಕ್ಷರು ಸುರೇಶ್, ಸದಸ್ಯರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷರು ಚಂದ್ರು, ತಾಲ್ಲೂಕು ಅಧ್ಯಕ್ಷರು ರಾಜೇಂದ್ರ, ತೋಟೇಶ್, ಬಿಇಒ ಮಂಜುಳಾ, ಜಿ.ಪಂ ಎಇಇ ಕುಮಾರ್, ನಿರ್ಮಿತಿ ಕೇಂದ್ರದ ಸಹಾಯಕ ಇಂಜಿನಿಯರ್ ಪ್ರತಾಪ್, ಹಾಗೂ ಇತರರು ಇದ್ದರು.

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು







ಎ.ಇ.ರಘು
ಕಾರ್ಯದರ್ಶಿ ಮಹದೇಶ್ವರಬೆಟ್ಟ ಪ್ರಾಧಿಕಾರ
ನಿಂಪುವಾರ್ತೆ

ನಿಂಪುವಾರ್ತೆ ಪತ್ರಿಕೆ ಓದುಗರು, ಜಾಹಿರಾತುದಾರರು ಹಾಗೂ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು



ನಿಂಪು ವಾರ್ತೆ






















EDITER, PUBLISHER, AND OWEND BY N.RAJESH, NO-2/76A, NIMPU NIVASA, PANNA STREET, BHEEMA NAGAR, KOLLEGAL TOWN – 571440 CHAMRAJA NAGAR DISTRICT.

PRINTER NAME- RAVI KUMAR, 1961/1, V V MARKET, OPP- AGRAHAR GANAPATHI TEMPLE ROAD, K.R.MOHALLA, MYSORE.